ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	402
ಮಾನ್ಯ ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ವಿಷಯ	:	ಕರ್ನಾಟಕ ದರ್ಶನ್ ಯೋಜನೆಯಡಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳ ಕುರಿತು.
ಉತ್ತರಿಸುವ ದಿನಾಂಕ	:	06.03.2020
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

ಕ್ರ.ಸ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ದರ್ಶನ್ ಯೋಜನೆಯಡಿ ವಿದ್ಯಾರ್ಥಿಗಳಿಗೆ ಪ್ರವಾಸ ಕಾರ್ಯಕ್ರಮಗಳ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ; ಶೈಕ್ಷಣಿಕ ವರ್ಷದ ಯಾವ ತಿಂಗಳಿನಲ್ಲಿ ಅವಕಾಶ ಕಲ್ಪಿಸಲಾಗಿದೆ;	2019–20ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 8ನೇ ತರಗತಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಸಾಮಾನ್ಯ ಯೋಜನೆಯಡಿ ಹಿಂದುಳಿದ ಹಾಗೂ ಹಾಗೂ ಇತರೆ ವರ್ಗಗಳ 8ನೇ ತರಗತಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಕಲ್ಪಿಸಲಾಗಿದೆ. ಈ ಕಾರ್ಯಕ್ರಮವನ್ನು ಸೆಪ್ಟೆಂಬರ್ 2019ರ ಮಾಹೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ
ಆ)	ಹಾಗಾದರೆ, ಸದರಿ ಯೋಜನೆಯಲ್ಲಿ ಸೌಲಭ್ಯವನ್ನು ಕಲ್ಪಿಸಲು ಅನುಸರಿಸುತ್ತಿರುವ ಮಾನದಂಡಗಳೇನು; (ವಿವರ ನೀಡುವುದು)	ಸದರಿ ಯೋಜನೆಯಲ್ಲಿ ಸೌಲಭ್ಯವನ್ನು ಕಲ್ಪಿಸಲು ಅನುಸರಿಸುತ್ತಿರುವ ಮಾನದಂಡಗಳನ್ನು **ಅನುಬಂಧ**ದಲ್ಲಿ ವಿವರಿಸಲಾಗಿದೆ.
ಇ)	ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ (ಇಂಗ್ಲೀಷ್ ಹಾಗೂ ಕನ್ನಡ ಮಾಧ್ಯಮ) ಶಾಲಾ ವಿದ್ಯಾರ್ಥಿಗಳಿಗೆ ಸದರಿ ಸೌಲಭ್ಯವನ್ನು ನೀಡಲಾಗುತ್ತಿದೆಯೇ? (ವಿವರ ನೀಡುವುದು)	2019–20ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಹಾಗೂ ಮೊರಾರ್ಜಿ ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಮತ್ತು ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳಿಗೆ ಮಾತ್ರ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಕಡತ ಸಂಖ್ಯೆ: ಟಿಓಆರ್ 36 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಅನುಬಂಧ

ಕರ್ನಾಟಕ ದರ್ಶನ ಯೋಜನೆಯ ಮಾನದಂಡಗಳು

<u>ಸರ್ಕಾರದ ಆದೇಶ ಸಂಖ್ಯೆ: ಪ್ರಇ 187 ಪ್ರವಾಯೋ 2016, ದಿನಾಂಕ:07-06-2016ಕ್ಕೆ</u>

<u>ಅನುಬಂಧ</u>

<u>2016-17.ನೇ ಸಾಲಿನಲ್ಲಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಇತರೆ ವರ್ಗ ಎಲ್ಲ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳುವ ಸಂಬಂಧ ಹೊರಡಿಸಿರುವ ಮಾರ್ಗಸೂಚಿಗಳು</u>

ಕರ್ನಾಟಕ ದರ್ಶನದ ಸಾಮಾನ್ಯ ಉದ್ದೇಶಗಳು :

- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪರಿಪೂರ್ಣವಾಗಿ ರಾಜ್ಯದಲ್ಲಿರುವ ಮುಖ್ಯವಾದ ಪ್ರವಾಸಿ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿಯನ್ನು ಅರಿಯುವುದು.
- ಮಕ್ಕಳು ತಮ್ಮ ಶೈಕ್ಷಣಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನವನ್ನು ನೀಡುವುದು.
- ಮಕ್ಕಳಲ್ಲಿ ಸಹಕಾರ, ಹೊಂದಾಣಿಕೆ, ನಾಯಕತ್ವ ಮನೋಭಾವವನ್ನು ಬೆಳೆಸುವುದು.
- ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಅರಿವು ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ಕರ್ನಾಟಕ ಸಾಮಾಜಿಕ ಸ್ಥಿತಿಗತಿಯ ಕುರಿತು ಅರಿವುಂಟು ಮಾಡುವುದು.
- ಮಕ್ಕಳಿಗೆ ನೈಜ ಪರಿಸರದ ದರ್ಶನ ಮಾಡಿಸುವುದು.
- ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಗಳನ್ನು ಹೊರ ಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು.
- ಕರ್ನಾಟಕ ಐತಿಹಾಸಿಕ ವಿಷಯಗಳ ನೈಜ ಸ್ಥಿತಿಯ ದರ್ಶನ ಮಾಡಿಸುವುದು.
- ಪ್ರಾದೇಶಿಕ ಮಟ್ಟದ ಜನಜೀವನ, ಭಾಷೆ, ಆಚಾರ ವಿಚಾರಗಳಲ್ಲಿನ ವೈವಿಧ್ಯತೆಯ ಅರಿವುಂಟು ಮಾಡುವುದು.

ನಿರ್ದಿಷ್ಟ ಉದ್ದೇಶಗಳು :

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು. ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಶಾಲೆ ಬಿಡುವ ಸಾಧ್ಯತೆಗಳು ಕಡಿಮೆಯಾಗುವುದು.
- ಆರ್ಥಿಕವಾಗಿ ಹಿಂದುಳಿದ ಮಕ್ಕಳು ಹಾಗೂ ಹೆಣ್ಣು ಮಕ್ಕಳು ರಾಜ್ಯದ ಅನೇಕ ಸ್ಥಳಗಳ ನೈಜ ಪರಿಸರ ದರ್ಶನ ಪಡೆಯಲು ಸಹಕಾರಿಯಾಗುವುದು.
- ಮಕ್ಕಳ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.

- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲ್ಯಗಳ ಸಂವರ್ಧನೆ ಮಾಡುವುದು.
- ನೋಡಿ ಕಲಿಯುವುದರಿಂದ ಅನೇಕ ಪರಿಕಲ್ಪನೆಗಳು ಸ್ಪಷ್ಟವಾಗುವುದು.
- ಮಕ್ಕಳ ಯೋಜನಾ ಶಕ್ತಿಯನ್ನು ವಿಶಾಲಗೊಳಿಸುವುದು.
- ರಾಜ್ಯದ ಸಂಸ್ಕೃತಿ, ಕಲೆ, ದೇಶಭಕ್ತಿ, ವೈಚಾರಿಕತೆ ಬಗ್ಗೆ ಅರಿವು ಮೂಡಿಸುವುದು.

ಮಕ್ಕಳಿಗೆ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಮಕ್ಕಳ ದಾಖಲಾತಿ, ಹಾಜರಾತಿ ಉತ್ತಮವಾಗುತ್ತದೆ. ಒಟ್ಟಾರೆ ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಎಲ್ಲಾ ಮಕ್ಕಳಲ್ಲಿ ಉತ್ಸಾಹ ತುಂಬುವುದಾಗಿದೆ. ಯೋಜನೆಯ ಲಾಭವು ನೇರವಾಗಿ ಮಕ್ಕಳಿಗೆ ತಲುಪುವುದರಿಂದ ಔಚಿತ್ಯಪೂರ್ಣವಾಗಿದ್ದು, ಪೋಷಕರು ಹಾಗೂ ಸಮುದಾಯದ ಸಹಕಾರವನ್ನು ಸಹ ಗಳಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟು ಕರ್ನಾಟಕ ದರ್ಶನ ಪ್ರವಾಸ ಆಯೋಜಿಸಲು ಉದ್ದೇಶಿಸಲಾಗಿದೆ.

ಘಟಕ ವೆಚ್ಚದ ವಿವರ:

ಪ್ರತಿ ಜಿಲ್ಲೆಯಲ್ಲಿ ಪ್ರತಿ ತಂಡದಲ್ಲಿ 50 ವಿದ್ಯಾರ್ಥಿಗಳು 2 ಶಿಕ್ಷಕರು+ಗೈಡ್+ಗ್ರೂಪ್-ಡಿ+ ಡ್ರೈವರ್+ಸಹಾಯಕರು = ಒಟ್ಟು 56 ಜನರನ್ನು ಕರೆದೊಯ್ಯಲು ತಗಲುವ ಅಂದಾಜು ವೆಚ್ಚವನ್ನು ಈ ಕೆಳಕಂಡಂತೆ ಲೆಕ್ಕಚಾರ ಮಾಡಲಾಗಿದೆ.

ಕ್ರಂ. ಸಂ.	ವಿವರ	50+6 ವಿದ್ಯಾರ್ಥಿಗಳಿಗೆ ತಗುಲುವ ವೆಚ್ಚ (ರೂ.ಗಳಲ್ಲಿ)	ಒಬ್ಬರಿಗೆ ತಗುಲುವ ವೆಚ್ಚ (ರೂ.ಗಳಲ್ಲಿ)
1	ಸಾರಿಗೆ 1. 56 ಸೀಟ್ ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಬಾಡಿಗೆ ವೆಚ್ಚ + ಡ್ರೈವರ್ ಬಾಟಾ	48000	960
	2. ವಿಮಾ ಕಂತು (56 ಮಂದಿಗೆ ರೂ.60/- ವಿಮಾ ಕಂತು)	3360	68
2	ವಸತಿ: ಡಾರ್ಮಿಟರಿ/ರೂಮ್ (ಪ್ರತಿ ಮಕ್ಕಳಿಗೆ ರೂ.150 ರಂತೆ 4 ದಿನಗಳಿಗೆ 50+5)	33000	660
3	ಊಟ: ಉಪಹಾರ-ಭೋಜನ-ಸಂಜೆ ಟೀ/ಕಾಫಿ-ರಾತ್ರಿ ಭೋಜನ (ಪ್ರತಿ ಮಕ್ಕಳಿಗೆ ರೂ.150 ರಂತೆ 4 ದಿನಗಳಿಗೆ 50+6)	33600	672
4	ಪ್ರಯಾಣ ಭತ್ಯೆ ಮತ್ತು ತುಟ್ಟಿ ಭತ್ಯೆ 1. ಗೈಡ್‌ಗೆ ಪ್ರತಿ ಪ್ರವಾಸಕ್ಕೆ ರೂ.2,000ಜ/- 2. ಗ್ರೂಪ್-ಡಿ, ಸಹಾಯಕರು ಪ್ರತಿ ಪ್ರವಾಸಕ್ಕೆ ರೂ.2,000/-	4000	80

5	ಶಿಕ್ಷಕರ ಗೌರವಧನ -2 ಶಿಕ್ಷಕರು ಒಬ್ಬರು ಶಿಕ್ಷಕರಿಗೆ ಪ್ರತಿ ಪ್ರವಾಸಕ್ಕೆ ರೂ.3000/-ರಂತೆ ಅವರು ಮುಖ್ಯ ಶಿಕ್ಷಕರಾಗಿದ್ದಲ್ಲಿ ರೂ.3,500/- ಭತ್ಯೆ ನಿಗಧಿಪಡಿಸಿದೆ.	6000	120
6	ವಾಹನ ನಿಲುಗಡೆ/ಟೋಲ್ ಫ್ರೀ/ಫ್ಲೆಕ್ಸ್ ಬ್ಯಾನರ್ಸ್/ದೂರವಾಣಿ ವೆಚ್ಚ	2500	50
7	ಪ್ರವೇಶ ಶುಲ್ಕ	1500	30
8	ಲೇಖನ ಸಾಮಾಗ್ರಿ : (2 ಪುಸ್ತಕ-ಪೆನ್ಸಿಲ್-ಕಲರ್ ಪೆನ್ಸಿಲ್-ಟೋಪ್ಪಿ) (ರೂ.200 ರಂತೆ 50 ಮಕ್ಕಳಿಗೆ)	10000	200
9	ಪ್ರವಾಸದಲ್ಲಿ ಸ್ಪರ್ಧಾತ್ಮಕ ಕಾರ್ಯಕ್ರಮಗಳಾದ ರಸಪ್ರಶ್ನೆ-ಚಿತ್ರಕಲೆ-ಪ್ರಬಂಧ-ಚರ್ಚಾ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ	4500	90
10	ಸಮವಸ್ತ್ರ (ಟೀ-ಶರ್ಟ್) + ಟೂರ್ ಕಿಟ್ ಬ್ಯಾಗ್ (ಪ್ರತಿ ವಿದ್ಯಾರ್ಥಿಗೆ ರೂ.540 ರಂತೆ 50 ವಿದ್ಯಾರ್ಥಿಗಳಿಗೆ) (ಬ್ಯಾಗ್‌ನಲ್ಲಿ ವಿದ್ಯಾರ್ಥಿ ಐ.ಡಿ.ಕಾರ್ಡ್+ಶಿಕ್ಷಕರ ದೂರವಾಣಿ ಸಂಖ್ಯೆ-ಬಸ್ ನಂಬರ್+ಲೇಖನ ಸಾಮಾಗ್ರಿಗಳು ಇರಬೇಕು ಈ ಬ್ಯಾಗ್ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ ಹಾಕಬೇಕು).	27000	540
11	ಇತರೆ	1540	30
	ಒಟ್ಟು	175000	3500

ಮೇಲ್ಕಂಡಂತೆ 56 ಜನರನ್ನೊಳಗೊಂಡು ಪ್ರತಿ ಜಿಲ್ಲೆಯಲ್ಲೂ ನಿಗಧಿಪಡಿಸಿರುವ ಗುರಿಗೆ ಅನುಸಾರವಾಗಿ 56 ಜನರ ತಂಡದಂತೆ ಪ್ರವಾಸ ಮಾಡಿಸುವುದು. ಪ್ರವಾಸದ ವೇಳೆ ಮಕ್ಕಳನ್ನು ಉತ್ತೇಜಿಸಲು ರಸಪ್ರಶ್ನೆ/ಪ್ರಬಂಧ/ಚಿತ್ರಕಲೆ/ಚರ್ಚಾ ಸ್ಪರ್ಧೆಗಳಲ್ಲಿ ಯಾವುದಾದರು 2 ಸ್ಪರ್ಧೆಗಳನ್ನು ಕಡ್ಡಾಯವಾಗಿ ನಡೆಸುವುದು. ಈ ಸ್ಪರ್ಧೆಗಳಲ್ಲಿ ವಿಜೇತರಾದ ಮೊದಲ ಮೂರು ವಿಜೇತರಿಗೆ ಮೊದಲನೇ ಬಹುಮಾನವಾಗಿ ರೂ.1,000/-ಬೆಲೆಯ ಪುಸ್ತಕ, ಎರಡನೇ ಬಹುಮಾನ ರೂ.750/-ಬೆಲೆಯ ಪುಸ್ತಕ, ಮೂರನೇ ನಗದು ಬಹುಮಾನ ರೂ.500/-ಬೆಲೆಯ ಪುಸ್ತಕಗಳನ್ನು ನೀಡುವುದು. ಪ್ರವಾಸ ಮುಗಿದ ನಂತರ ವಿಜೇತರಾದ ಮಕ್ಕಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಕಛೇರಿಗೆ ಕರೆಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಬಹುಮಾನಗಳನ್ನು ವಿತರಿಸುವುದು.

ಮಕ್ಕಳಿಗೆ ವಿತರಿಸುವ ಟೂರ್ ಕಿಟ್‌ಬ್ಯಾಗ್‌ನಲ್ಲಿ ಕರ್ನಾಟಕ ಪ್ರವಾಸೋದ್ಯಮದ ಪ್ರವಾಸಿ ತಾಣಗಳ, ಕಲೆ ಸಂಸ್ಕೃತಿಯ ಬಗ್ಗೆ ಮಾಹಿತಿ, ಕರ್ನಾಟಕದ ಭೂಪಟ, ಫಜಲ್ಸ್, ಕ್ರಾಸ್‌ವರ್ಡ್, ಪೆನ್ಸಿಲ್, ಪೆನ್, ಟೋಪ್ಪಿ, ಟೀಶರ್ಟ್ ಇತ್ಯಾದಿ ಸಾಮಾಗ್ರಿಗಳನ್ನು ಸೇರಿಸಿ ಮಕ್ಕಳಿಗೆ ವಿತರಿಸಬೇಕು.

ಕರ್ನಾಟಕ ದರ್ಶನವನ್ನು ಸೋಮವಾರದಿಂದ ಶುಕ್ರವಾರದವರೆಗೆ 5 ಹಗಲು 4 ರಾತ್ರಿ ದಿನಗಳಿಗೆ ಆಯೋಜಿಸುವುದು.

1. ಅನುಷ್ಠಾನಕ್ಕೆ ಸಂಬಂಧಿಸಿದ ಅಂಶಗಳು:

- ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ದರ್ಶನ ಸಮನ್ವಯ ಸಮಿತಿಯನ್ನು ರಚಿಸುವುದು: ಸಮಿತಿ ಸದಸ್ಯರು ಈ ಕೆಳಗಿನಂತಿರುವುದು.

    1. ಮುಖ್ಯ ಯೋಜನಾ ಅಧಿಕಾರಿ.(ಸಿ.ಪಿ.ಒ)- ಸದಸ್ಯರು
    2. ಡಯಟ್ ಪ್ರಾಂಶುಪಾಲರು
    3. ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿ,
    4. ಸ.ಶಿ.ಅ. ಡಯಟ್‌ನ ಸಿ.ಎಂ.ಡಿ.ಇ. ವಿಭಾಗದ ಮುಖ್ಯಸ್ಥರು,
    5. ಆಯಾ ಜಿಲ್ಲೆ~~ಯ ಎಲ್ಲಾ~~ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು,
    6. ಎಲ್ಲಾ ತಾಲ್ಲೂಕಿನ ತಹಸೀಲ್ದಾರರು,
    7. ಕೆ.ಎಸ್.ಆರ್.ಟಿ.ಸಿ. ಪ್ರತಿನಿಧಿ,
    8. ಆರ್.ಟಿ.ಓ. ಪ್ರತಿನಿಧಿ,
    9. ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು,
    10. ಪ್ರತಿ ತಾಲ್ಲೂಕಿನಿಂದ ಒಂದು ಸ್ವಯಂ ಸೇವಾ ಸಂಘದ ಪ್ರತಿನಿಧಿ,
    11. ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು,
    12. ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ – ಸದಸ್ಯ ಕಾರ್ಯದರ್ಶಿಗಳು.

- ಜಿಲ್ಲೆಯ ಎಲ್ಲಾ ವಲಯಗಳ ಕರ್ನಾಟಕ ದರ್ಶನಕ್ಕೆ ಸಂಬಂಧಿಸಿದಂತೆ ತಾಲ್ಲೂಕುವಾರು ಕ್ರಿಯಾ ಯೋಜನೆಯನ್ನು ಹಾಗೂ ಮಕ್ಕಳ ಆಯ್ಕೆ ಪಟ್ಟಿಯನ್ನು ಮೇಲ್ಕಂಡ ಸಮಿತಿಯಲ್ಲಿ ಅನುಮೋದಿಸುವುದು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮನ್ವಯ ಕಾರ್ಯ ನಿರ್ವಹಿಸುವುದು.

- ಪ್ರವಾಸವನ್ನು ಉತ್ತರ ಕರ್ನಾಟಕದ ಮಕ್ಕಳಿಗೆ ದಕ್ಷಿಣ ಕರ್ನಾಟಕದ ಪ್ರವಾಸಿ ತಾಣಗಳ ದರ್ಶನ ಮಾಡಿಸುವುದು ಹಾಗೆಯೇ ದಕ್ಷಿಣ ಕರ್ನಾಟಕದ ಮಕ್ಕಳಿಗೆ ಉತ್ತರ ಕರ್ನಾಟಕದ ಪ್ರವಾಸಿ ತಾಣಗಳ ದರ್ಶನ ಮಾಡಿಸುವುದು.

- **ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಕೆಳಗಿನಂತೆ ಆದ್ಯತೆಯ ಮೇರೆಗೆ ಆಯೋಜಿಸುವುದು ಕಡ್ಡಾಯವಾಗಿರುತ್ತದೆ.**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯರ್ಥಿಗಳನ್ನು ಹಾಗೂ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಇತರೆ ವರ್ಗ ಎಲ್ಲ ವಿದ್ಯಾರ್ಥಿಗಳಿಗೆ ಒಟ್ಟಾಗಿ ಕರ್ನಾಟಕ ದರ್ಶನ ಪ್ರವಾಸ ಏರ್ಪಡಿಸುವುದು.

ಕಲಬುರಗಿ ವಿಭಾಗದ ಮಕ್ಕಳು:

ಕಲಬುರಗಿ ವಿಭಾಗದ ಮಕ್ಕಳನ್ನು ಹಾಸನ, ಮೈಸೂರು, ಮಂಡ್ಯ, ಕೊಡಗು, ಉಡುಪಿ, ಚಾಮರಾಜನಗರ, ಚಿಕ್ಕಮಗಳೂರು ಹಾಗೂ ಬೆಂಗಳೂರು ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

ಬೆಳಗಾವಿ ವಿಭಾಗದ ಮಕ್ಕಳು:

ಈ ವಿಭಾಗದ ಮಕ್ಕಳನ್ನು ಚಿತ್ರದುರ್ಗ, ಬೆಂಗಳೂರು, ಚಿಕ್ಕಬಳ್ಳಾಪುರ, ಹಾಸನ, ಚಾಮರಾಜನಗರ, ಮೈಸೂರು, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

ಬೆಂಗಳೂರು ವಿಭಾಗದ ಮಕ್ಕಳು:

ಈ ವಿಭಾಗದ ಮಕ್ಕಳನ್ನು ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಬೀದರ್, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

ಮೈಸೂರು ವಿಭಾಗದ ಮಕ್ಕಳು:

ಈ ವಿಭಾಗದ ಮಕ್ಕಳನ್ನು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬಳ್ಳಾರಿ, ಬಾಗಲಕೋಟೆ, ಬಿಜಾಪುರ, ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

- ಪ್ರವಾಸದ ಸಮಯದಲ್ಲಿ ಮಕ್ಕಳಿಗೆ ಬಿಸಿ ಊಟವನ್ನೇ ಒದಗಿಸುವಂತೆ ಸೂಚಿಸಲಾಗಿದೆ. ಶಾಲೆಯನ್ನು ಬಿಡುವಾಗ ಬಕೆಟ್‌ಗಳಲ್ಲಿ ಆಹಾರ ಕೊಂಡೊಯ್ಯುವುದನ್ನು ನಿಷೇಧಿಸಲಾಗಿದೆ.
- ಮಕ್ಕಳನ್ನು ಕೆರೆಗಳಿಗೆ ಸ್ನಾನಕ್ಕೆ ಕೊಂಡ್ಯೊಯ್ಯುವುದನ್ನು ಹಾಗೂ ಬಯಲು ಶೌಚಾಲಯಕ್ಕೆ ಕೊಂಡೊಯ್ಯುವುದನ್ನು ಖಡ್ಡಾಯವಾಗಿ ನಿಷೇಧಿಸಲಾಗಿದೆ. ಇಂತಹ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದರೆ ಶಿಸ್ತು ಕ್ರಮ ಜರುಗಿಸಲಾಗುವುದು.

- ಮಕ್ಕಳಿಗೆ ಶಾಲಾ-ಕಾಲೇಜುಗಳಲ್ಲಿ ವಸತಿಯನ್ನು ಕಲ್ಪಿಸುವುದನ್ನು ನಿಷೇಧಿಸಲಾಗಿದೆ.
- ಇಲಾಖೆಯು ರಾಜ್ಯದ ವಿವಿಧ ಸ್ಥಳಗಳಲ್ಲಿ ನಿರ್ಮಿಸಿರುವ ಯಾತ್ರಿ ನಿವಾಸಗಳ ಪಟ್ಟಿಯನ್ನು ಸಹಾಯಕ ನಿರ್ದೇಶಕರು/ಉಪ ನಿರ್ದೇಶಕರಿಂದ ಪಡೆದು ಅಂತಹ ವಸತಿ ಸೌಲಭ್ಯಗಳಲ್ಲಿಯೇ ಆಧ್ಯತೆಯ ಮೇರೆಗೆ ವಸತಿ ಕಲ್ಪಿಸುವುದು.
- ಕೆ.ಎಸ್.ಟಿ.ಡಿ.ಸಿ ನಡೆಸುತ್ತಿರುವ ಹೋಟೆಲ್‌ಗಳಲ್ಲಿ/ಯಾತ್ರಿನಿವಾಸ ಆಧ್ಯತೆ ಮೇರೆಗೆ ಮಕ್ಕಳಿಗೆ ವಸತಿಯ ವ್ಯವಸ್ಥೆಯನ್ನು ಕಲ್ಪಿಸುವುದು ಕಡ್ಡಾಯವಾಗಿದೆ. ಕೆ.ಎಸ್.ಟಿ.ಡಿ.ಸಿ ಸೌಲಭ್ಯಗಳಲ್ಲಿ ಇಲ್ಲದೇ ಇರುವ ಕಡೆ ಖಾಸಗಿ ಹೋಟೇಲ್‌ಗಳಲ್ಲಿ ಉತ್ತಮ ಊಟ/ವಸತಿ ವ್ಯವಸ್ಥೆ ಕಲ್ಪಿಸುವುದು.
- ಕರ್ನಾಟಕ ದರ್ಶನವನ್ನು ಪೂರ್ಣಗೊಳಿಸಿ ಖರ್ಚು-ವೆಚ್ಚಕ್ಕೆ ಸಂಬಂಧಿಸಿದಂತೆ ಹಣ ಉಪಯೋಗಿತ ಪತ್ರ. ಪ್ರವಾಸದ ಛಾಯಾಚಿತ್ರಗಳು, ಪ್ರವಾಸದ ಬಗ್ಗೆ ಮಕ್ಕಳಿಂದ ಅನಿಸಿಕೆ ಪತ್ರ ವನ್ನು (ಫೀಡ್‌ಬ್ಯಾಕ್ ಫಾರಂ) ಭರ್ತಿಮಾಡಿ ಪಡೆಯುವುದು ಹಾಗೂ ಪ್ರವಾಸದ ಬಗ್ಗೆ ಪ್ರವಾಸೋದ್ಯಮ ಇಲಾಖೆಗೆ ವಿವರವಾದ ವರದಿ ಸಲ್ಲಿಸುವುದು.

ವಿದ್ಯಾರ್ಥಿಗಳನ್ನು ಹಾಗೂ ಮೇಲ್ವಿಚಾರಕರ ಆಯ್ಕೆಗೆ ಮಾನದಂಡಗಳು :

<u>ಮಕ್ಕಳ ಆಯ್ಕೆ:</u>

- ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಲಿಯುತ್ತಿರುವ 8. 9 ಮತ್ತು 10ನೇ ತರಗತಿಯ ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡುವುದು. ಇದರಲ್ಲಿ ಹೆಣ್ಣು ಮಕ್ಕಳನ್ನು ಪ್ರತ್ಯೇಕ ಬಸ್ಸಿನಲ್ಲಿ ಕರೆದೊಯ್ಯಬೇಕು.
- ಆರೋಗ್ಯಕರವಾಗಿರುವ ಮಕ್ಕಳನ್ನು ಆಯ್ಕೆ ಮಾಡುವುದು.
- ತಂದೆ ತಾಯಿಗಳಿಂದ ಒಪ್ಪಿಗೆ ಪತ್ರ ಪಡೆಯುವುದು.
- ಕರ್ನಾಟಕ ದರ್ಶನಕ್ಕೆ ಬರಲಿರುವ ಶಾಲೆಗಳನ್ನು ಆಯ್ಕೆ ಮಾಡುವಲ್ಲಿ ಪ್ರತಿ ತಾಲ್ಲೂಕಿನಿಂದ ಸರ್ಕಾರಿ ಪ್ರೌಢಶಾಲೆಗಳಲ್ಲಿ 8, 9 ಮತ್ತು 10ನೇ ತರಗತಿಯ ಮಕ್ಕಳನ್ನು ಆಯ್ಕೆ ಮಾಡುವುದು.
- ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಹಾಗೂ ದೀರ್ಘಕಾಲಿಕ ಕಾಯಿಲೆಗಳಿಂದ ನರಳುತ್ತಿರುವವರನ್ನು ಕರೆತರಬಾರದು.
- ನದಿ ಮೂಲ, ನದಿ ದಂಡೆಗಳು ಮತ್ತು ಈಜು ಆಡುವಂತಹ ಕ್ರಿಯೆಗಳಲ್ಲಿ ಮಕ್ಕಳನ್ನು ನಿಷೇಧಿಸುವುದು.
- ಜಿಲ್ಲಾ ಗುರಿಗೆ ಅನುಗುಣವಾಗಿ ಪ್ರತಿ ತಾಲ್ಲೂಕಿನ ಮಕ್ಕಳಿಗೆ ಸಮಾನ ಅವಕಾಶ ಲಭಿಸುವಂತೆ ಕ್ರಮ ವಹಿಸುವುದು (ಅನುಬಂಧ-1ನ್ನು ನೋಡುವುದು).

ಶಿಕ್ಷಕರನ್ನು ಆಯ್ಕೆ ಮಾಡಲು ನಿಗದಿಪಡಿಸಿರುವ ಮಾನದಂಡಗಳು :

- ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ಪುರುಷ ಶಿಕ್ಷಕರು ಗಂಡು ಮಕ್ಕಳ ತಂಡದಲ್ಲಿ ಹಾಗೂ ಇಬ್ಬರು ಮಹಿಳಾ ಶಿಕ್ಷಕರು ಹೆಣ್ಣು ಮಕ್ಕಳ ತಂಡದಲ್ಲಿರಬೇಕು ಹಾಗೂ ಇವರನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ), ಶಿಕ್ಷಣ ಇಲಾಖೆ ರವರು ಆಯ್ಕೆ ಮಾಡಬೇಕು.

- ಈ ಪೈಕಿ ಒಬ್ಬರು ಸ್ಕೌಟ್ಸ್ & ಗೈಡ್ಸ್ ತರಬೇತಿ ಹೊಂದಿದ ಶಿಕ್ಷಕರಾಗಿರಬೇಕು.
- ಒಬ್ಬರು ವಿಜ್ಞಾನ ಹಾಗೂ ಒಬ್ಬರು ಕಲಾ ಶಿಕ್ಷಕರಾಗಿರಬೇಕು.
- ಪ್ರಥಮ ಚಿಕಿತ್ಸೆ ಜ್ಞಾನವನ್ನು ಹೊಂದಿರಬೇಕು.
- ಆರೋಗ್ಯವಂತ ಕ್ರಿಯಾಶೀಲ ಉತ್ಸಾಹಿ ಶಿಕ್ಷಕರಾಗಿರಬೇಕು.
- 50 ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು.
- ಪ್ರತಿ ತಂಡಕ್ಕೂ ಬೇರೆ ಬೇರೆ ಶಿಕ್ಷಕರನ್ನು ಆಯ್ಕೆ ಮಾಡಬೇಕು.

ಕರ್ನಾಟಕ ದರ್ಶನ ವೇಳಾಪಟ್ಟಿ :

1. ಕರ್ನಾಟಕ ದರ್ಶನ ಪ್ರವಾಸವನ್ನು ಅಕ್ಟೋಬರ್-2015 ರೊಳಗೆ ಪೂರ್ಣಗೊಳಿಸುವುದು.
2. ಎಲ್ಲಾ ಮಕ್ಕಳಿಗೆ ಮುಂಚಿತವಾಗಿ ಪ್ರವಾಸ ವೇಳಾಪಟ್ಟಿ ಪ್ರವಾಸಿ ತಾಣಗಳ ರೂಟ್ ಮ್ಯಾಪ್ ಮತ್ತು ವಿವರಗಳನ್ನು ನೀಡುವುದು.
3. ಇಡೀ ಪ್ರವಾಸದ ಕಾರ್ಯಕ್ರಮದಲ್ಲಿ ರಾತ್ರಿ ವೇಳೆ ತಂಗುವ ವ್ಯವಸ್ಥೆಯನ್ನು ಮುಂಚಿತವಾಗಿಯೇ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು ರವರ ನೇತೃತ್ವದಲ್ಲಿ ವ್ಯವಸ್ಥೆ ಮಾಡುವುದು.
4. ಎಲ್ಲಾ ಪೋಷಕರಿಗೂ ಪ್ರವಾಸಕ್ಕೆ ಹೋಗುವ ಶಿಕ್ಷಕರ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನೀಡುವುದು.
5. ಪ್ರತಿ ಬಸ್ಸಿನಲ್ಲಿ ಪ್ರಾಥಮಿಕ ಚಿಕಿತ್ಸಾ ಕಿಟ್ ಮತ್ತು ಕೆಲ ಸಾಮಾನ್ಯ ಔಷಧಿಗಳನ್ನು ಕಡ್ಡಾಯವಾಗಿ ಕೊಂಡೊಯ್ಯತಕ್ಕದ್ದು.
6. ಜಿಲ್ಲಾ ಕಛೇರಿಯಿಂದ ಕ್ರೋಢೀಕರಣ ವರದಿ, ವೆಚ್ಚದ ವಿವರ, ಪ್ರವಾಸಕ್ಕೆ ಹೊರಟ ಮಕ್ಕಳ ವಿವರ (ವರ್ಗವಾರು ಕ್ರೋಢೀಕರಣ ನೀಡುವುದು) ಹಾಗೂ ದಾಖಲೀಕರಣದ ಪ್ರತಿ ಛಾಯಾಚಿತ್ರ ಸಮೇತ ಸಲ್ಲಿಸುವುದು.
7. ಪ್ರವಾಸ ಪೂರ್ಣಗೊಂಡ 30 ದಿನಗಳೊಳಗಾಗಿ ದಾಖಲಾತಿಗಳೊಂದಿಗೆ ಖರ್ಚುವೆಚ್ಚಗಳ ಪಟ್ಟಿಯೊಂದಿಗೆ ಅನುಪಾಲನಾ ವರದಿಯನ್ನು ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ರವರಿಗೆ ನೀಡುವುದು.

(ಬಿ.ಎನ್. ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 286 ಪ್ರಶಾಯೋ 2016, ದಿನಾಂಕ:26-09-2016 ಕ್ಕೆ

2016-17ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳುವ ಸಂಬಂಧ ಸಿದ್ಧಪಡಿಸಿರುವ ಮಾರ್ಗಸೂಚಿಗಳು

ಕರ್ನಾಟಕ ದರ್ಶನದ ಸಾಮಾನ್ಯ ಉದ್ದೇಶಗಳು :-

- ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪರಿಪೂರ್ಣವಾಗಿ ರಾಜ್ಯದಲ್ಲಿರುವ ಮುಖ್ಯವಾದ ಪ್ರವಾಸಿ ಸ್ಥಳಗಳು ಅಂದರೆ ಸ್ಥಳೀಯ ವೈಜ್ಞಾನಿಕ, ಧಾರ್ಮಿಕ, ಭೌಗೋಳಿಕ, ನೈಸರ್ಗಿಕ, ಐತಿಹಾಸಿಕ, ವಿಜ್ಞಾನ ಮತ್ತು ಕೈಗಾರಿಕೆಗಳು, ಉತ್ತಮ ಶಾಲೆ, ಆಕಾಶವಾಣಿ ಕೇಂದ್ರ, ಗಣಿಗಳು, ಉದ್ಯಾನವನ, ಮ್ಯೂಸಿಯಂ, ಪ್ರಖ್ಯಾತ ವ್ಯಕ್ತಿಗಳು ಹುಟ್ಟಿದ ಊರು ಇತ್ಯಾದಿಯನ್ನು ಅರಿಯುವುದು.
- ಮಕ್ಕಳು ತಮ್ಮ ಶೈಕ್ಷಣಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುವಂತೆ ಮಾರ್ಗದರ್ಶನವನ್ನು ನೀಡುವುದು.
- ಮಕ್ಕಳಲ್ಲಿ ಸಹಕಾರ, ಹೊಂದಾಣಿಕೆ, ನಾಯಕತ್ವ ಮನೋಭಾವವನ್ನು ಬೆಳೆಸುವುದು.
- ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಅರಿವು ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
- ಕರ್ನಾಟಕ ಸಾಮಾಜಿಕ ಸ್ಥಿತಿಗತಿಯ ಕುರಿತು ಅರಿವುಂಟು ಮಾಡುವುದು.
- ಮಕ್ಕಳಿಗೆ ನೈಜ ಪರಿಸರದ ದರ್ಶನ ಮಾಡಿಸುವುದು.
- ತರಗತಿ ಕಲಿಕೆಗೆ ಪೂರಕವಾದ ಮಾಹಿತಿ ಒದಗಿಸುವುದು.
- ಶಾಲಾ ಚಟುವಟಿಕೆಗಳನ್ನು, ಹೊರಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳಿಸುವುದು.
- ಕರ್ನಾಟಕ ಐತಿಹಾಸಿಕ ವಿಷಯಗಳ ನೈಜ ಸ್ಥಿತಿಯ ದರ್ಶನ ಮಾಡಿಸುವುದು.
- ಪ್ರಾದೇಶಿಕ ಮಟ್ಟದ ಜನಜೀವನ, ಭಾಷೆ, ಆಚಾರ ವಿಚಾರಗಳಲ್ಲಿನ ವೈವಿಧ್ಯತೆಯ ಅರಿವುಂಟು ಮಾಡುವುದು.

ನಿರ್ದಿಷ್ಟ ಉದ್ದೇಶಗಳು :-

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು. ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಶಾಲೆ ಬಿಡುವ ಸಾಧ್ಯತೆಗಳು ಕಡಿಮೆಯಾಗುವುದು.
- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ರಾಜ್ಯದ ಅನೇಕ ಸ್ಥಳಗಳ ನೈಜ ಪರಿಸರ ದರ್ಶನ ಪಡೆಯಲು ಸಹಕಾರಿಯಾಗುವುದು.
- ಮಕ್ಕಳ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲ್ಯಗಳ ಸಂವರ್ಧನೆ ಮಾಡುವುದು.

- ನೋಡಿ ಕಲಿಯುವುದರಿಂದ ಅನೇಕ ಪರಿಕಲ್ಪನೆಗಳು ಸ್ಪಷ್ಟವಾಗುವುದು.
- ಮಕ್ಕಳ ಯೋಚನಾ ಶಕ್ತಿಯನ್ನು ವಿಶಾಲಗೊಳಿಸುವುದು.
- ರಾಜ್ಯದ ಸಂಸ್ಕೃತಿ, ಕಲೆ, ದೇಶಭಕ್ತಿ, ವೈಚಾರಿಕತೆ ಬಗ್ಗೆ ಅರಿವು ಮೂಡಿಸುವುದು.

ಮಕ್ಕಳಿಗೆ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಮಕ್ಕಳ ದಾಖಲಾತಿ, ಹಾಜರಾತಿ ಉತ್ತಮವಾಗುತ್ತದೆ. ಒಟ್ಟಾರೆ ಗುಣಮಟ್ಟದ ಶಿಕ್ಷಣ ನೀಡುವ ದಿಸೆಯಲ್ಲಿ ಎಲ್ಲಾ ಮಕ್ಕಳಲ್ಲಿ ಉತ್ಸಾಹ ತುಂಬುವುದಾಗಿದೆ. ಯೋಜನೆಯ ಲಾಭವು ನೇರವಾಗಿ ಮಕ್ಕಳಿಗೆ ತಲುಪುವುದರಿಂದ ಔಚಿತ್ಯಪೂರ್ಣವಾಗಿದ್ದು, ಪೋಷಕರು ಹಾಗೂ ಸಮುದಾಯದ ಸಹಕಾರವನ್ನು ಸಹ ಗಳಿಸಬಹುದಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

<u>ಘಟಕ ವೆಚ್ಚದ ವಿವರ :-</u>

ಪ್ರತಿ ಜಿಲ್ಲೆಯಲ್ಲಿ ಪ್ರತಿ ತಂಡದಲ್ಲಿ 50 ವಿದ್ಯಾರ್ಥಿಗಳು 2 ಶಿಕ್ಷಕರು +ಬಿ.ಆರ್.ಪಿ/ ಸಿ.ಆರ್.ಪಿ + ಗೈಡ್+ಕಾವಲುಗಾರ + ಡ್ರೈವರ್ = ಒಟ್ಟು 56 ಜನರನ್ನು ಕರೆದೊಯ್ಯಲು ತಗಲುವ ವೆಚ್ಚವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರಂ. ಸಂ.	ವಿವರ	50+6 ವಿದ್ಯಾರ್ಥಿಗಳಿಗೆ ತಗುಲುವ ವೆಚ್ಚ (ರೂ.ಗಳಲ್ಲಿ)	ಒಬ್ಬರಿಗೆ ತಗುಲುವ ವೆಚ್ಚ (ರೂ.ಗಳಲ್ಲಿ)
1	ಸಾರಿಗೆ 1. 56 ಸೀಟ್ ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಬಾಡಿಗೆ ವೆಚ್ಚ+ ಡ್ರೈವರ್ ಬಾಟಾ .	48000	960
	2. ವಿಮಾ ಕಂತು (56 ಮಂದಿಗೆ ರೂ.60/- ವಿಮಾ ಕಂತು)	3360	68
2	ವಸತಿ ಡಾರ್ಮಿಟರಿ/ರೂಮ್ (ಪ್ರತಿ ಮಕ್ಕಳಿಗೆ ರೂ.150 ರಂತೆ 4 ದಿನಗಳಿಗೆ 50+5)	33000	660
3	ಊಟ ಉಪಹಾರ-ಭೋಜನ-ಸಂಜೆ ಟೀ/ಕಾಫಿ-ರಾತ್ರಿ ಭೋಜನ (ಪ್ರತಿ ಮಕ್ಕಳಿಗೆ ರೂ.150 ರಂತೆ 4 ದಿನಗಳಿಗೆ 50+6)	33600	672
4	ಪ್ರಯಾಣ ಭತ್ಯೆ ಮತ್ತು ಊಟದ ಭತ್ಯೆ 1. ಗೈಡ್‌ಗೆ ಪ್ರತಿ ಪ್ರವಾಸಕ್ಕೆ ರೂ.2,000/- 2. ಗ್ರೂಪ್-ಡಿ, ಸಹಾಯಕರು ಪ್ರತಿ ಪ್ರವಾಸಕ್ಕೆ ರೂ.2,000/-	4000	80
5	ಶಿಕ್ಷಕರ ಗೌರವಧನ -2 ಶಿಕ್ಷಕರು ಒಬ್ಬರು ಶಿಕ್ಷಕರಿಗೆ ಪ್ರತಿ ಪ್ರವಾಸಕ್ಕೆ ರೂ.3000/-ರಂತೆ ಅವರು ಮುಖ್ಯ ಶಿಕ್ಷಕರಾಗಿದ್ದಲ್ಲಿ ರೂ.3,500/- ಭತ್ಯೆ ನಿಗಧಿಪಡಿಸಿದೆ.	6000	120
6	ವಾಹನ ನಿಲುಗಡೆ/ಟೋಲ್ ಫೀ/ಫ್ಲೆಕ್ಸ್ ಬ್ಯಾನರ್/ದೂರವಾಣಿ ವೆಚ್ಚ	2500	50
7	ಪ್ರವೇಶ ಶುಲ್ಕ	1500	30

.....3

8	ಲೇಖನ ಸಾಮಾಗ್ರಿ : (2 ಪುಸ್ತಕ-ಪೆನ್ಸಿಲ್-ಕಲರ್ ಪೆನ್ಸಿಲ್-ಟೋಪ್ಪಿ) (ರೂ.200 ರಂತೆ 50 ಮಕ್ಕಳಿಗೆ)		10000	200
9	ಪ್ರವಾಸದಲ್ಲಿ ಸ್ಪರ್ಧಾತ್ಮಕ ಕಾರ್ಯಕ್ರಮಗಳಾದ ರಸಪ್ರಶ್ನೆ-ಚಿತ್ರಕಲೆ-ಪ್ರಬಂಧ-ಚರ್ಚಾ ಸ್ಪರ್ಧೆ ಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ		4500	90
10	ಸಮವಸ್ತ್ರ (ಟೀ-ಶರ್ಟ್) + ಟೂರ್ ಕಿಟ್ ಬ್ಯಾಗ್ (ಪ್ರತಿ ವಿದ್ಯಾರ್ಥಿಗೆ ರೂ.540 ರಂತೆ 50 ವಿದ್ಯಾರ್ಥಿಗಳಿಗೆ) (ಬ್ಯಾಗ್‌ನಲ್ಲಿ ವಿದ್ಯಾರ್ಥಿ ಐ.ಡಿ.ಕಾರ್ಡ್+ಶಿಕ್ಷಕರ ದೂರವಾಣಿ ಸಂಖ್ಯೆ_ಬಸ್ ನಂಬರ್+ಲೇಖನ ಸಾಮಾಗ್ರಿಗಳು ಇರಬೇಕು ಈ ಬ್ಯಾಗ್ ಮೇಲೆ ಪ್ರವಾಸೋದ್ಯಮ ಇಲಾಖೆಯ ಲೋಗೋ ಹಾಕಬೇಕು).		27000	540
11	ಇತರೆ		1540	30
	ಒಟ್ಟು		175000	3500

ಮೇಲ್ಕಂಡಂತೆ 56 ಜನರನ್ನೊಳಗೊಂಡು ಪ್ರತಿ ಜಿಲ್ಲೆಯಲ್ಲೂ ನಿಗದಿಪಡಿದಿರುವ ಗುರಿಗೆ ಅನುಸಾರವಾಗಿ 56 ಜನರ ತಂಡದಂತೆ ಪ್ರವಾಸ ಮಾಡಿಸುವುದು. ಪ್ರವಾಸದ ವೇಳೆ ಮಕ್ಕಳನ್ನು ಉತ್ತೇಜಿಸಲು ರಸಪ್ರಶ್ನೆ/ಪ್ರಬಂಧ/ಚಿತ್ರಕಲೆ/ಚರ್ಚಾ ಸ್ಪರ್ಧೆ ಗಳಲ್ಲಿ ಯಾವುದಾದರು 2 ಸ್ಪರ್ಧೆಗಳನ್ನು ಕಡ್ಡಾಯವಾಗಿ ನಡೆಸುವುದು. ಈ ಸ್ಪರ್ಧೆಗಳಲ್ಲಿ ವಿಜೇತರಾದ ಮೊದಲ ಮೂರು ವಿಜೇತರಿಗೆ ಮೊದಲನೇ ಬಹುಮಾನವಾಗಿ ರೂ.1,000/-ಬೆಲೆಯ ಪುಸ್ತಕ, ಎರಡನೇ ಬಹುಮಾನ ರೂ.750/-ಬೆಲೆಯ ಪುಸ್ತಕ, ಮೂರನೇ ನಗದು ಬಹುಮಾನ ರೂ.500/-ಬೆಲೆಯ ಪುಸ್ತಕಗಳನ್ನು ನೀಡುವುದು. ಪ್ರವಾಸ ಮುಗಿದ ನಂತರ ವಿಜೇತರಾದ ಮಕ್ಕಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಮ್ಮುಖದಲ್ಲಿ ಬಹುಮಾನಗಳನ್ನು ವಿತರಿಸುವುದು.

ಮಕ್ಕಳಿಗೆ ವಿತರಿಸುವ ಟೂರ್ ಕಿಟ್ ಬ್ಯಾಗ್‌ನ ಮೇಲೆ "ಕರ್ನಾಟಕ ಒಂದು ರಾಜ್ಯ ಹಲವು ಜಗತ್ತುಗಳು" ಎಂಬ ಇಲಾಖೆಯ ಲೋಗೋವನ್ನು ಮುದ್ರಿಸಬೇಕು. ಈ ಬ್ಯಾಗ್‌ನಲ್ಲಿ ಕರ್ನಾಟಕ ಪ್ರವಾಸೋದ್ಯಮ ಪ್ರವಾಸಿ ತಾಣಗಳ, ಕಲೆ ಸಂಸ್ಕೃತಿಯ ಬಗ್ಗೆ ಮಾಹಿತಿ, ಕರ್ನಾಟಕದ ಭೂಪಟ, ಫಜಲ್ಸ್, ಕ್ರಾಸ್‌ವರ್ಡ್, ಪೆನ್ಸಿಲ್, ಪೆನ್, ಟೋಪ್ಪಿ, ಟೀಶರ್ಟ್ ಇತ್ಯಾದಿ ಸಾಮಾಗ್ರಿಗಳನ್ನು ಸೇರಿಸಿ ಮಕ್ಕಳಿಗೆ ವಿತರಿಸಬೇಕು.

ಕರ್ನಾಟಕ ದರ್ಶನವನ್ನು ಸೋಮವಾರದಿಂದ ಶುಕ್ರವಾರದವರೆಗೆ 4 ಹಗಲು 5 ರಾತ್ರಿ ದಿನಗಳಿಗೆ ಆಯೋಜಿಸುವುದು.

1. ಅನುಷ್ಠಾನಕ್ಕೆ ಸಂಬಂಧಿಸಿದ ಅಂಶಗಳು:

- ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ದರ್ಶನ ಸಮನ್ವಯ ಸಮಿತಿಯನ್ನು ರಚಿಸುವುದು: ಸಮಿತಿ ಸದಸ್ಯರು ಈ ಕೆಳಗಿನಂತಿರುವುದು.

1. ಮುಖ್ಯ ಯೋಜನಾ ಅಧಿಕಾರಿ,(ಸಿ.ಪಿ.ಒ)- ಸದಸ್ಯರು

2. ಡಯಟ್ ಪ್ರಾಂಶುಪಾಲರು
3. ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿ,
4. ಸ.ಶಿ.ಅ. ಡಯಟ್‌ನ ಸಿ.ಎಂ.ಡಿ.ಇ. ವಿಭಾಗದ ಮುಖ್ಯಸ್ಥರು,
5. ಆಯಾ ಜಿಲ್ಲೆಯ ಎಲ್ಲಾ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು.
6. ಎಲ್ಲಾ ತಾಲ್ಲೂಕಿನ ತಹಸೀಲ್ದಾರರು,
7. ಕೆ.ಎಸ್.ಆರ್.ಟಿ.ಸಿ. ಪ್ರತಿನಿಧಿ,
8. ಆರ್.ಟಿ.ಓ. ಪ್ರತಿನಿಧಿ,
9. ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳು.
10. ಪ್ರತಿ ತಾಲ್ಲೂಕಿನಿಂದ ಒಂದು ಸ್ವಯಂ ಸೇವಾ ಸಂಘದ ಪ್ರತಿನಿಧಿ.
11. ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು,
12. ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ - ಸದಸ್ಯ ಕಾರ್ಯದರ್ಶಿಗಳು.
13. ಜಿಲ್ಲಾ ಸಾಮಾಜಿಕ ಅಧಿಕಾರಿ (ಡಿ.ಎಸ್.ಡಬ್ಲ್ಯು) ಮತ್ತು ಬಿಸಿಎಂ ಅಧಿಕಾರಿ.

- ಜಿಲ್ಲೆಯ ಎಲ್ಲಾ ವಲಯಗಳ ಕರ್ನಾಟಕ ದರ್ಶನಕ್ಕೆ ಸಂಬಂಧಿಸಿದಂತೆ ತಾಲ್ಲೂಕುವಾರು ಕ್ರಿಯಾ ಯೋಜನೆಯನ್ನು ಹಾಗೂ ಮಕ್ಕಳ ಆಯ್ಕೆ ಪಟ್ಟಿಯನ್ನು ಮೇಲ್ಕಂಡ ಸಮಿತಿಯಲ್ಲಿ ಅನುಮೋದಿಸುವುದು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮನ್ವಯ ಕಾರ್ಯ ನಿರ್ವಹಿಸುವುದು.

- ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಕೆಳಗಿನಂತೆ ಆದ್ಯತೆಯ ಮೇರಗೆ ಆಯೋಜಿಸುವುದು ಕಡ್ಡಾಯವಾಗಿರುತ್ತದೆ.

  1. ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಇತರೆ ವರ್ಗದ ಮಕ್ಕಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸಲು ಈಗಾಗಲೇ ಪ್ರತ್ಯೇಕವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಹಿಗಾಗಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಇತರೆ ವರ್ಗ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಎರಡೂ ವರ್ಗದ ವಿದ್ಯಾರ್ಥಿಗಳನ್ನು ಒಟ್ಟಿಗೆ ಸೇರಿಸಿಕೊಂಡು ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

  2. ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸುವ ಸಂದರ್ಭದಲ್ಲಿ ಬಸ್ಸುಗಳ ಮೇಲೆ ಕರ್ನಾಟಕ ಪ್ರವಾಸೋದ್ಯಮದ ಹೆಸರು ಹಾಗೂ ಲೋಗೋವನ್ನು ಬಸ್ಸಿನ ಮುಂಭಾಗ ಹಾಗೂ ಹಿಂಭಾಗದಲ್ಲಿ ಎದ್ದು ಕಾಣಿಸುವ ರೀತಿಯಲ್ಲಿ ಬ್ಯಾನರ್‌ಗಳನ್ನು ಸಿದ್ಧಪಡಿಸಿ ಹಾಕುವುದು ಕಡ್ಡಾಯವಾಗಿರುತ್ತದೆ.

ಕಲಬುರಗಿ ವಿಭಾಗದ ಮಕ್ಕಳು:

ಕಲಬುರಗಿ ವಿಭಾಗದ ಮಕ್ಕಳನ್ನು ಹಾಸನ, ಮೈಸೂರು, ಮಂಡ್ಯ, ಕೊಡಗು, ಉಡುಪಿ, ಚಾಮರಾಜನಗರ, ಚಿಕ್ಕಮಗಳೂರು ಹಾಗೂ ಬೆಂಗಳೂರು ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆಧ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

ಬೆಳಗಾವಿ ವಿಭಾಗದ ಮಕ್ಕಳು:

ಈ ವಿಭಾಗದ ಮಕ್ಕಳನ್ನು ಚಿತ್ರದುರ್ಗ, ಬೆಂಗಳೂರು, ಚಿಕ್ಕಬಳ್ಳಾಪುರ, ಹಾಸನ, ಚಾಮರಾಜನಗರ, ಮೈಸೂರು, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆಧ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

ಬೆಂಗಳೂರು ವಿಭಾಗದ ಮಕ್ಕಳು:

ಈ ವಿಭಾಗದ ಮಕ್ಕಳನ್ನು ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಬೀದರ್, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆಧ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

ಮೈಸೂರು ವಿಭಾಗದ ಮಕ್ಕಳು:

ಈ ವಿಭಾಗದ ಮಕ್ಕಳನ್ನು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬಳ್ಳಾರಿ, ಬಾಗಲಕೋಟೆ, ಬಿಜಾಪುರ, ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆಧ್ಯತೆಯ .ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು ಖಡ್ಡಾಯವಾಗಿರುತ್ತದೆ.

- ಪ್ರವಾಸದ ಸಮಯದಲ್ಲಿ ಮಕ್ಕಳಿಗೆ ಬಿಸಿ ಊಟವನ್ನೇ ಒದಗಿಸುವಂತೆ ಸೂಚಿಸಲಾಗಿದೆ. ಶಾಲೆಯನ್ನು ಬಿಡುವಾಗ ಬಕೆಟ್‌ಗಳಲ್ಲಿ ಆಹಾರ ಕೊಂಡೋಯ್ಯುವುದನ್ನು ನಿಷೇಧಿಸಲಾಗಿದೆ.
- ಮಕ್ಕಳನ್ನು ಕೆರೆಗಳಿಗೆ ಸ್ನಾನಕ್ಕೆ ಕೊಂಡ್ಯೊಯ್ಯುವುದನ್ನು ಹಾಗೂ ಬಯಲು ಶೌಚಾಲಯಕ್ಕೆ ಕೊಂಡೊಯ್ಯುವುದನ್ನು ಖಡ್ಡಾಯವಾಗಿ ನಿಷೇಧಿಸಲಾಗಿದೆ. ಇಂತಹ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದರೆ ಶಿಸ್ತು ಕ್ರಮ ಜರುಗಿಸಲಾಗುವುದು.
- ಮಕ್ಕಳಿಗೆ ಶಾಲಾ-ಕಾಲೇಜುಗಳಲ್ಲಿ ವಸತಿಯನ್ನು ಕಲ್ಪಿಸುವುದನ್ನು ನಿಷೇಧಿಸಲಾಗಿದೆ.
- ಇಲಾಖೆಯು ರಾಜ್ಯದ ವಿವಿಧ ಸ್ಥಳಗಳಲ್ಲಿ ನಿರ್ಮಿಸಿರುವ ಯಾತ್ರಿ ನಿವಾಸಗಳ ಪಟ್ಟಿಯನ್ನು ಸಹಾಯಕ ನಿರ್ದೇಶಕರು/ಉಪ ನಿರ್ದೇಶಕರಿಂದ ಪಡೆದು ಅಂತಹ ವಸತಿ ಸೌಲಭ್ಯಗಳಲ್ಲಿಯೇ ಆಧ್ಯತೆಯ ಮೇರೆಗೆ ವಸತಿ ಕಲ್ಪಿಸುವುದು.

- ಕೆ.ಎಸ್.ಟಿ.ಡಿ.ಸಿ ನಡೆಸುತ್ತಿರುವ ಹೋಟೆಲ್‌ಗಳಲ್ಲಿ/ಯಾತ್ರಿನಿವಾಸ ಅಧ್ಯತೆ ಮೇರೆಗೆ ಮಕ್ಕಳಿಗೆ ವಸತಿಯ ವ್ಯವಸ್ಥೆಯನ್ನು ಕಲ್ಪಿಸುವುದು ಕಡ್ಡಾಯವಾಗಿದೆ. ಕೆ.ಎಸ್.ಟಿ.ಡಿ.ಸಿ ಸೌಲಭ್ಯಗಳಲ್ಲಿ ಇಲ್ಲದೇ ಇರುವ ಕಡೆ ಖಾಸಗಿ ಹೋಟೇಲ್‌ಗಳಲ್ಲಿ ಉತ್ತಮ ಊಟ/ವಸತಿ ವ್ಯವಸ್ಥೆ ಕಲ್ಪಿಸುವುದು.

- ಕರ್ನಾಟಕ ದರ್ಶನವನ್ನು ಪೂರ್ಣಗೊಳಿಸಿ ಖರ್ಚು-ವೆಚ್ಚಕ್ಕೆ ಸಂಬಂಧಿಸಿದಂತೆ ಹಣ ಉಪಯೋಗಿತ ಪತ್ರ. ಪ್ರವಾಸದ ಛಾಯಾಚಿತ್ರಗಳು. ಪ್ರವಾಸದ ಬಗ್ಗೆ ಮಕ್ಕಳಿಂದ ಅನಿಸಿಕೆ ಪತ್ರ ವನ್ನು (ಫೀಡ್‌ಬ್ಯಾಕ್ ಫಾರಂ) ಭರ್ತಿಮಾಡಿ ಪಡೆಯುವುದು ಹಾಗೂ ಪ್ರವಾಸದ ಬಗ್ಗೆ ಪ್ರವಾಸೋದ್ಯಮ ಇಲಾಖೆಗೆ ವಿವರವಾದ ವರದಿ ಸಲ್ಲಿಸುವುದು.

ವಿದ್ಯಾರ್ಥಿಗಳು ಹಾಗೂ ಮೇಲ್ವಿಚಾರಕರ ಆಯ್ಕೆಗೆ ಮಾನದಂಡಗಳು :-

ಮಕ್ಕಳ ಆಯ್ಕೆ:

- ಸರ್ಕಾರಿ ಶಾಲೆಗಳ ಮತ್ತು ಸರ್ಕಾರಿ ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ 8, 9 ಮತ್ತು 10ನೇ ತರಗತಿಯ ಮಕ್ಕಳನ್ನು ಸದರಿ ಕಾರ್ಯಕ್ರಮಕ್ಕೆ ಆಯ್ಕೆ ಮಾಡುವುದು. ಇದರಲ್ಲಿ ಹೆಣ್ಣು ಮಕ್ಕಳನ್ನು ಪ್ರತ್ಯೇಕ ಬಸ್ಸಿನಲ್ಲಿ ಕರೆದೊಯ್ಯಬೇಕು. ಕೆಲವು ಜಿಲ್ಲೆಗಳಲ್ಲಿ ಭೌತಿಕ ಗುರಿ ಕಡಿಮೆ ಇದ್ದು ಇಂತಂಹ ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದ ಪಕ್ಷದಲ್ಲಿ ಸಂಯುಕ್ತವಾಗಿ ಪ್ರವಾಸ ಏರ್ಪಡಿಸುವುದು.
- ಆರೋಗ್ಯಕರವಾಗಿರುವ ಮಕ್ಕಳನ್ನು ಆಯ್ಕೆ ಮಾಡುವುದು.
- ತಂದೆ ತಾಯಿಗಳಿಂದ ಒಪ್ಪಿಗೆ ಪತ್ರ ಪಡೆಯುವುದು.
- ಕರ್ನಾಟಕ ದರ್ಶನಕ್ಕೆ ವಲಯವಾರು ಶಾಲೆಗಳನ್ನು ಆಯ್ಕೆ ಮಾಡುವಲ್ಲಿ ಪ್ರತಿ ತಾಲ್ಲೂಕಿನಿಂದ ಹಿರಿಯ ಪ್ರಾಥಮಿಕ ಶಾಲೆಗಳ 8, 9 ಮತ್ತು 10ನೇ ತರಗತಿಯ ಮಕ್ಕಳನ್ನು ಆಯ್ಕೆ ಮಾಡುವುದು.
- ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಹಾಗೂ ಧೀರ್ಘಕಾಲಿಕ ಕಾಯಿಲೆಗಳಿಂದ ನರಳುತ್ತಿರುವವರನ್ನು ಕರೆತರಬಾರದು.
- ನದಿ ಮೂಲ. ನದಿ ದಂಡೆಗಳು ಮತ್ತು ಈಜು ಆಡುವಂತಹ ಕ್ರಿಯೆಗಳಲ್ಲಿ ಮಕ್ಕಳನ್ನು ನಿಷೇಧಿಸುವುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳ ಜಿಲ್ಲಾ ಗುರಿಗೆ ಅನುಗುಣವಾಗಿ ಪ್ರತೀ ತಾಲ್ಲೂಕಿನ ಮಕ್ಕಳಿಗೆ ಸಮಾನ ಅವಕಾಶ ಲಭಿಸುವಂತೆ ಕ್ರಮ ವಹಿಸುವುದು. (ಅನುಬಂಧ-1ನ್ನು ನೋಡುವುದು)

ಶಿಕ್ಷಕರನ್ನು ಆಯ್ಕೆ ಮಾಡಲು ನಿಗಧಿಪಡಿಸಿರುವ ಮಾನದಂಡಗಳು :-

- ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ಪುರುಷ ಶಿಕ್ಷಕರು ಹಾಗೂ ಇಬ್ಬರು ಮಹಿಳಾ ಶಿಕ್ಷಕರು ಹೆಣ್ಣು ಮಕ್ಕಳ ತಂಡದಲ್ಲಿರಬೇಕು ಹಾಗೂ ಇವರನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ), ಶಿಕ್ಷಣ ಇಲಾಖೆ ರವರು ಆಯ್ಕೆ ಮಾಡಬೇಕು.
- ಈ ಪೈಕಿ ಒಬ್ಬರು ಸ್ಕೌಟ್ಸ್ & ಗೈಡ್ಸ್ ತರಬೇತಿ ಹೊಂದಿದ ಶಿಕ್ಷಕರಾಗಿರಬೇಕು.
- ಒಬ್ಬರು ಕಲಾ ಶಿಕ್ಷಕರಾಗಿರಬೇಕು.
- ಪ್ರಥಮ ಚಿಕಿತ್ಸೆ ಜ್ಞಾನವನ್ನು ಹೊಂದಿರಬೇಕು.
- ಆರೋಗ್ಯವಂತೆ ಕ್ರಿಯಾಶೀಲ ಉತ್ಸಾಹಿ ಶಿಕ್ಷಕರಾಗಿರಬೇಕು.
- 50 ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು.
- ಪ್ರತಿ ತಂಡಕ್ಕೂ ಬೇರೆ ಬೇರೆ ಶಿಕ್ಷಕರನ್ನು ಆಯ್ಕೆ ಮಾಡಬೇಕು.

ಕರ್ನಾಟಕ ದರ್ಶನ ವೇಳಾಪಟ್ಟಿ :-

1. ಕರ್ನಾಟಕ ದರ್ಶನ ಪ್ರವಾಸವನ್ನು ಡಿಸೆಂಬರ್-2016 ರೊಳಗೆ ಪೂರ್ಣಗೊಳಿಸುವುದು.
2. ಎಲ್ಲಾ ಮಕ್ಕಳಿಗೆ ಮುಂಚಿತವಾಗಿ ಪ್ರವಾಸ ವೇಳಾಪಟ್ಟಿ ಪ್ರವಾಸಿ ತಾಣಗಳ ರೂಟ್ ಮ್ಯಾಪ್ ಮತ್ತು ವಿವರಗಳನ್ನು ನೀಡುವುದು.
3. ಇಡೀ ಪ್ರವಾಸದ ಕಾರ್ಯಕ್ರಮದಲ್ಲಿ ರಾತ್ರಿ ವೇಳೆ ತಂಗುವ ವ್ಯವಸ್ಥೆಯನ್ನು ಮುಂಚಿತವಾಗಿಯೇ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು ರವರ ನೇತೃತ್ವದಲ್ಲಿ ವ್ಯವಸ್ಥೆ ಮಾಡುವುದು.
4. ಎಲ್ಲಾ ಪೋಷಕರಿಗೂ ಪ್ರವಾಸಕ್ಕೆ ಹೋಗುವ ಶಿಕ್ಷಕರ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನೀಡುವುದು.
5. ಪ್ರತಿ ಬಸ್ಸಿನಲ್ಲಿ ಪ್ರಾಥಮಿಕ ಚಿಕಿತ್ಸಾ ಕಿಟ್ ಮತ್ತು ಕೆಲ ಸಾಮಾನ್ಯ ಔಷಧಿಗಳನ್ನು ಕಡ್ಡಾಯವಾಗಿ ಕೊಂಡೊಯ್ಯತಕ್ಕದ್ದು.
6. ಜಿಲ್ಲಾ ಕಛೇರಿಯಿಂದ ಕ್ರೋಢೀಕರಣ ವರದಿ, ವೆಚ್ಚದ ವಿವರ, ಪ್ರವಾಸಕ್ಕೆ ಹೊರಟ ಮಕ್ಕಳ ವಿವರ (ವರ್ಗವಾರು ಕ್ರೋಢೀಕರಣ ನೀಡುವುದು) ಹಾಗೂ ದಾಖಲೀಕರಣದ ಪ್ರತಿ ಛಾಯಾಚಿತ್ರ ಸಮೇತ ಸಲ್ಲಿಸುವುದು.
7. ಪ್ರತಿ ಜಿಲ್ಲೆಯಲ್ಲೂ ಪ್ರತಿ ತಂಡದಲ್ಲಿ 50 ವಿದ್ಯಾರ್ಥಿಗಳಂತೆ ಪ್ರತ್ಯೇಕ ತಂಡಗಳಲ್ಲಿ ಪ್ರವಾಸವನ್ನು ಕೈಗೊಳ್ಳುವುದು.
8. ಪ್ರವಾಸ ಪೂರ್ಣಗೊಂಡ 30 ದಿನಗಳೊಳಗಾಗಿ ದಾಖಲಾತಿಗಳೊಂದಿಗೆ ಅನುಪಾಲನಾ ವರದಿಯನ್ನು ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ರವರಿಗೆ ನೀಡುವುದು.

(ಬಿ.ಎನ್ ಯತಿರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ಪ್ರಇ 191 ಪ್ರವಾಯೋ 2016 ದಿನಾಂಕ:7–6–2016ಕ್ಕೆ ಅನುಬಂಧ

2016–17ನೇ ಸಾಲಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 5,000 ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳುವ ಸಂಬಂಧ ಸಿದ್ಧಪಡಿಸಿರುವ ಮಾರ್ಗಸೂಚಿಗಳು

ಉದ್ದೇಶ:

- ಮಕ್ಕಳಿಗೆ ಪ್ರವಾಸದ ಪ್ರತ್ಯಕ್ಷ ಅನುಭವ ನೀಡುವುದು.
- ಸಂಸ್ಕೃತಿಯಲ್ಲಿರುವ ವೈವಿಧ್ಯತೆ ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು.
- ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ ಆನಂದಿಸುತ್ತಾ ನಮ್ಮ ಸಂಸ್ಕೃತಿ ಮತ್ತು ಇತಿಹಾಸದ ಬಗ್ಗೆ ಹೆಮ್ಮೆಪಡುವುದು.
- ಮಕ್ಕಳಲ್ಲಿ ಸಹಕಾರ ಹೊಂದಾಣಿಕೆ, ನಾಯಕತ್ವ ಮನೋಭಾವ ಅಭಿವೃದ್ಧಿಗೊಳ್ಳುವುದು.
- ಸಾಮಾಜಿಕ ಸ್ಥಿತಿಗತಿಯ ಅರಿವುಂಟಾಗುವುದು.
- ನೈಜ ಪರಿಸರದ ದರ್ಶನವಾಗುವುದು.
- ಹೊರ ಪ್ರಪಂಚ ಹಾಗೂ ಸಮಾಜದೊಂದಿಗೆ ಸಮನ್ವಯಗೊಳ್ಳುವುದು.
- ಮಕ್ಕಳಲ್ಲಿ ವೀಕ್ಷಣೆ ಮತ್ತು ಮೌಖಿಕ ಕೌಶಲ ಅಭಿವೃದ್ಧಿಗೊಳ್ಳುತ್ತದೆ.
- ನೋಡುವುದರಿಂದ ಅನೇಕ ವಿಷಯಗಳನ್ನು ಕಲಿಯುತ್ತಾರೆ.

ಆಯ್ಕೆ ಪ್ರಕ್ರಿಯೆ:

- ನೊಂದಣಿ ಹೊಂದಿರುವ ದಳಗಳನ್ನು ಆಯ್ಕೆ ಮಾಡುವುದು.
- ದ್ವಿತೀಯ ಸೋಪಾನದಿಂದ ರಾಷ್ಟ್ರಪತಿ ಪುರಸ್ಕಾರ ಪಡೆದವರಿಗೆ ಆಯ್ಕೆ ಮಾಡುವುದು.
- 2013–14, 2014–15ನೇ ಸಾಲಿನಲ್ಲಿ ಈಗಾಗಲೇ ಕರ್ನಾಟಕ ದರ್ಶನದಲ್ಲಿ ಭಾಗವಹಿಸಿರುವ ಮಕ್ಕಳನ್ನು ಪುನಃ ಆಯ್ಕೆ ಮಾಡಬಾರದು.
- 7, 8, 9, 10ನೇ ತರಗತಿಯಲ್ಲಿರುವ ಮಕ್ಕಳನ್ನು ಆಯ್ಕೆ ಮಾಡಬೇಕು.
- ಪ್ರತಿ ಬಸ್ಸಿನಲ್ಲಿ 2 ಗೈಡ್ ಶಿಕ್ಷಕಿಯರು/3 ಸ್ಕೌಟ್ ಶಿಕ್ಷಕರು ಇರಬೇಕು.
- ಪ್ರತೀ ದಳದಿಂದ ಒಬ್ಬರು ಸ್ಕೌಟ್ಸ್/ಗೈಡ್ ಶಿಕ್ಷಕರು ಮತ್ತು 10 ಮಕ್ಕಳನ್ನು ಮಾತ್ರ ಆಯ್ಕೆ ಮಾಡುವುದು (10+1)

ಕಲಬುರಗಿ ವಿಭಾಗದ ಮಕ್ಕಳು	ಹಾಸನ, ಮೈಸೂರು, ಮಂಡ್ಯ, ಕೊಡಗು, ಉಡುಪಿ, ಚಾಮರಾಜನಗರ, ಚಿಕ್ಕಮಗಳೂರು, ಹಾಗೂ ಬೆಂಗಳೂರು ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು,
ಬೆಳಗಾವಿ ವಿಭಾಗದ ಮಕ್ಕಳು	ಚಿತ್ರದುರ್ಗ, ಬೆಂಗಳೂರು, ಚಿಕ್ಕಬಳ್ಳಾಪುರ, ಹಾಸನ, ಚಾಮರಾಜನಗರ, ಮೈಸೂರು, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು.
ಬೆಂಗಳೂರು ವಿಭಾಗದ ಮಕ್ಕಳು	ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಬೀದರ್, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು.
ಮೈಸೂರು ವಿಭಾಗದ ಮಕ್ಕಳು	ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬಳ್ಳಾರಿ, ಬಾಗಲಕೋಟೆ, ಬಿಜಾಪುರ, ಕಲಬುರಗಿ ಹಾಗೂ ಬೀದರ್ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳಿಗೆ ಆದ್ಯತೆಯ ಮೇರೆಗೆ ಪ್ರವಾಸ ಹಮ್ಮಿಕೊಳ್ಳುವುದು.

<u>ವಿವರ ಈ ಕೆಳಗಿನಂತಿದೆ:-</u>

ಕ್ರ.ಸಂ	ವಿವರ	50+6 ವಿದ್ಯಾರ್ಥಿಗಳಿಗೆ ತಗಲುವ ವೆಚ್ಚ (ರೂ.ಗಳಲ್ಲಿ)	ಒಬ್ಬರಿಗೆ ತಗಲುವ ವೆಚ್ಚ (ರೂ.ಗಳಲ್ಲಿ)
1	ಸಾರಿಗೆ : 1. 56 ಸೀಟ್ ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಬಾಡಿಗೆ ವೆಚ್ಚ + ಡ್ರೈವರ್ ಬಾಟಾ.	48000	960
	2. ವಿಮಾ ಕಂತು (56 ಮಂದಿಗೆ ರೂ.60/- ವಿಮಾ ಕಂತು)	3360	68
2	ವಸತಿ: ಡಾರ್ಮಿಟರಿ/ರೂಮ್ (ಪ್ರತಿ ಮಕ್ಕಳಿಗೆ ರೂ.150 ರಂತೆ 4 ದಿನಗಳಿಗೆ 50+5)	33000	660
3	ಊಟ: ಉಪಹಾರ-ಭೋಜನ-ಸಂಜೆ ಟೀ/ಕಾಫಿ-ರಾತ್ರಿ ಭೋಜನ (ಪ್ರತಿ ಮಕ್ಕಳಿಗೆ ರೂ.150 ರಂತೆ 4 ದಿನಗಳಿಗೆ 50+6)	33600	672
4	ಪ್ರಯಾಣ ಭತ್ಯೆ ಮತ್ತು ತುಟ್ಟಿ ಭತ್ಯೆ 1. ಗೈಡ್‌ಗೆ ಪ್ರತಿ ಪ್ರವಾಸಕ್ಕೆ ರೂ.2,000/- 2. ಗ್ರೂಪ್-ಡಿ, ಸಹಾಯಕರು ಪ್ರತಿ ಪ್ರವಾಸಕ್ಕೆ ರೂ.2,000/-	4000	80
5	ಶಿಕ್ಷಕರ ಗೌರವಧನ- 5 ಶಿಕ್ಷಕರು/ಶಿಕ್ಷಕಿಯರು ಒಬ್ಬರು ಶಿಕ್ಷಕರಿಗೆ ಪ್ರತಿ ಪ್ರವಾಸಕ್ಕೆ ರೂ.1200/- ರಂತೆ	6000	120
6	ವಾಹನ ನಿಲುಗಡೆ/ಟೋಲ್ ಫ್ರೀ/ಫ್ಲೆಕ್ಸ್ ಬ್ಯಾನರ್ಸ್/ದೂರವಾಣಿ ವೆಚ್ಚ	2500	50
7	ಪ್ರವೇಶ ಶುಲ್ಕ	1500	30
8	ಲೇಖನ ಸಾಮಾಗ್ರಿ: (2 ಪುಸ್ತಕ-ಪೆನ್ಸಿಲ್-ಕಲರ್ ಪೆನ್ಸಿಲ್-ಟೋಪಿ) (ರೂ.200 ರಂತೆ 50 ಮಕ್ಕಳಿಗೆ)	10000	200
9	ಪ್ರವಾಸದಲ್ಲಿ ಸ್ಪರ್ಧಾತ್ಮಕ ಕಾರ್ಯಕ್ರಮಗಳಾದ ರಸಪ್ರಶ್ನೆ - ಚಿತ್ರಕಲೆ-ಪ್ರಬಂಧ-ಚರ್ಚಾ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ	4500	90
10	ಸಮವಸ್ತ್ರ (ಟೀ-ಶರ್ಟ್) + ಟೂರ್ ಕಿಟ್ ಬ್ಯಾಗ್ (ಪ್ರತಿ ವಿದ್ಯಾರ್ಥಿಗೆ ರೂ.540 ರಂತೆ 50 ವಿದ್ಯಾರ್ಥಿಗಳಿಗೆ) (ಬ್ಯಾಗ್‌ನಲ್ಲಿ ವಿದ್ಯಾರ್ಥಿ ಐ.ಡಿ. ಕಾರ್ಡ್+ಶಿಕ್ಷಕರ ದೂರವಾಣಿಸಂಖ್ಯೆ ಬಸ್‌ನಂಬರ್+ಲೇಖನ ಸಾಮಾಗ್ರಿಗಳು ಇರಬೇಕು ಬ್ಯಾಗ್ ಮೇಲೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲೋಗೋ ಮತ್ತು ಪ್ರವಾಸೋದ್ಯಮ ಇಲಾಖೆಯ ಲೋಗೋ ಹಾಕಬೇಕು.	27000	540
11	ಇತರೆ	1540	30
	ಒಟ್ಟು	175000	3500

ಒಂದು ಬಸ್ಸಿಗೆ ಐದು ಶಿಕ್ಷಕರು - 3 ಸ್ಕೌಟ್ಸ್ ಮಾಸ್ಟರ್/2 ಗೈಡ್ ಕ್ಯಾಪ್ಟನ್ ಶಿಕ್ಷಕರು, ಪ್ರತಿ ಶಿಕ್ಷಕರಿಗೆ ಪ್ರವಾಸ ಭತ್ಯೆ ರೂ.1200/- ಅಥವಾ ಮುಖ್ಯ ಶಿಕ್ಷಕರಿಗೆ ರೂ.2000/- ಮತ್ತು ಮುಖ್ಯ ಶಿಕ್ಷಕರ ಜೊತೆ ಪ್ರವಾಸ ಮಾಡುವ ಸ್ಕೌಟ್ಸ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳಿಗೆ ರೂ.1200/- ನೀಡಲಾಗುವುದು.

.....3

<u>ಸೂಚನೆ :</u>

- ಆರೋಗ್ಯಕರವಾಗಿರುವ ಮಕ್ಕಳನ್ನು ಆಯ್ಕೆ ಮಾಡುವುದು.
- ತಂದೆ ತಾಯಿಗಳಿಂದ ಒಪ್ಪಿಗೆ ಪತ್ರ ಪಡೆಯುವುದು.
- ನದಿ ದಂಡೆಗಳು ಮತ್ತು ಈಜುವ ಕ್ರಿಯೆಗಳಲ್ಲಿ ಮಕ್ಕಳನ್ನು ನಿಷೇಧಿಸುವುದು.
- ಆರೋಗ್ಯವಂತೆ ಕ್ರಿಯಾಶೀಲ ಉತ್ಸಾಹಿ ಶಿಕ್ಷಕರಾಗಿರಬೇಕು.
- 50 ವರ್ಷಕ್ಕಿಂತ ಕಡಿಮೆ ವಯೋಮಾನದವರಾಗಿರಬೇಕು.
- ಪ್ರವಾಸ ಹೋಗುವ ಸ್ಥಳದ ಪರಿಚಯವನ್ನು ಮನಗಂಡಿರಬೇಕು.
- ಕರ್ನಾಟಕ ದರ್ಶನ ಪ್ರವಾಸವನ್ನು ಡಿಸೆಂಬರ್ – 2018 ರೊಳಗೆ ಪೂರ್ಣಗೊಳಿಸುವುದು.
- ಎಲ್ಲಾ ಮಕ್ಕಳಿಗೆ ಮುಂಚಿತವಾಗಿ ಪ್ರವಾಸ ವೇಳಾಪಟ್ಟಿ ಪ್ರವಾಸಿ ತಾಣಗಳ ರೂಟ್ ಮ್ಯಾಪ್ ಮತ್ತು ವಿವರಗಳನ್ನು ನೀಡುವುದು.
- ಎಲ್ಲಾ ಪೋಷಕರಿಗೂ ಪ್ರವಾಸಕ್ಕೆ ಹೋಗುವ ಶಿಕ್ಷಕ/ಶಿಕ್ಷಕಿಯರ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನೀಡುವುದು.
- ಪ್ರತಿ ಬಸ್ಸಿನಲ್ಲಿ ಪ್ರಥಮ ಚಿಕಿತ್ಸಾ ಕಿಟ್ ಮತು ಕೆಲ ಸಾಮಾನ್ಯ ಔಷಧಿಗಳನ್ನು ಕಡ್ಡಾಯವಾಗಿ ಕೊಂಡೊಯ್ಯತಕ್ಕದ್ದು.
- ಜಿಲ್ಲಾ ಕಛೇರಿಯಿಂದ ಕ್ರೋಢೀಕರಣ ವರದಿ, ವೆಚ್ಚದ ವಿವರ, ಪ್ರವಾಸಕ್ಕೆ ಹೊರಟ ಮಕ್ಕಳ ವಿವರ (ವರ್ಗವಾರು ಕ್ರೋಢೀಕರಣ ನೀಡುವುದು) ಹಾಗೂ ದಾಖಲೀಕರಣದ ಪ್ರತಿ ಛಾಯಾಚಿತ್ರ ಸಮೇತ ಸಲ್ಲಿಸುವುದು.
- ಪ್ರವಾಸ ಪೂರ್ಣಗೊಂಡ 30 ದಿನಗಳೊಳಗಾಗಿ ದಾಖಲಾತಿಗಳೊಂದಿಗೆ ಖರ್ಚು–ವೆಚ್ಚಗಳ ಪಟ್ಟಿಯೊಂದಿಗೆ ಅನುಪಾಲನಾ ವರದಿಯನ್ನು ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಇವರಿಗೆ ನೀಡುವುದು.
- ಪ್ರಥಮ ಚಿಕಿತ್ಸೆಯ ಜ್ಞಾನ ಹೊಂದಿದ ಶಿಕ್ಷಕ/ಶಿಕ್ಷಕಿ ಇರಬೇಕು.
- ಪ್ರವಾಸಿ ತಾಣಗಳ ರೂಟ್ ಮ್ಯಾಪ್ ಮತ್ತು ಎಲ್ಲರೂ ವಿವರ ಪೋಷಕರಿಗೆ ನೀಡತಕ್ಕದ್ದು.
- ಟೀ–ಶರ್ಟ್ ಮತ್ತು ಟೂರ್ ಕಿಟ್ ಬ್ಯಾಗ್‌ಗೆ ಪ್ರವಾಸೋದ್ಯಮ ಇಲಾಖೆ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲೋಗೋ ಪ್ರಿಂಟ್ ಮಾಡಿಸುವುದು.
- ನಾವು ನೀಡುವ ಹಣದಲ್ಲಿ ಸಾರಿಗೆ ವೆಚ್ಚ, ಡ್ರೈವರ್ ಬಾಡಿಗೆ, ವಿಮಾ ಕಂತು, ವಸತಿ ವೆಚ್ಚ, ಉಪಹಾರ ಭೋಜನ, ಕಾಫಿ–ಟೀಗಳ ವೆಚ್ಚ, ಸ್ಕೌಟ್ಸ್–ಗೈಡ್ಸ್‌ಗಳ ಪ್ರವಾಸ ಭತ್ಯೆ, ಗ್ರೂಪ್ 'ಡಿ' ಸಹಾಯಕರ ಪ್ರವಾಸ ಭತ್ಯೆ, ಶಿಕ್ಷಕರ ಗೌರವಧನ, ವಾಹನ ನಿಲುಗಡೆ, ಟೋಲ್ ಫೀ, ಫ್ಲೆಕ್ಸ್, ಬ್ಯಾನರ್ಸ್, ದೂರವಾಣಿ ವೆಚ್ಚ, ಪ್ರವೇಶ ಶುಲ್ಕ, ಸ್ಪರ್ಧಾತ್ಮಕ ಕಾರ್ಯಕ್ರಮಗಳಲ್ಲಿ ವಿಜೇತರಿಗೆ ಬಹುಮಾನ ವೆಚ್ಚ, ಇವುಗಳನ್ನು ಖರ್ಚುಮಾಡಿ ಸರಿಯಾದ ಓಚರ್‌ಗಳೊಂದಿಗೆ ಲೆಕ್ಕ ಪತ್ರಗಳನ್ನು ರಾಜ್ಯ ಸಂಸ್ಥೆಗೆ ನೀಡತಕ್ಕದ್ದು.

[ಬಿ.ಎನ್. ಯತಿರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ